# ಕನ್ನಡ ರಾಜ್ಯೋತ್ಸವ ೨೦೨೫

ದಿನಾಂಕ : ೨೬- ೧೧-೨೦೨೫

## “ ಚೇತನ” ನಡೆ ಕನ್ನಡ ನುಡಿ ಕನ್ನಡ

ಶ್ರೀ ಚಾಮುಂಡೇಶ್ವರಿ ಶಿಕ್ಷಣ ಸಂಸ್ಥೆಗಳು 70ನೇ ಕನ್ನಡ ರಾಜ್ಯೋತ್ಸವ **ಚೇತನ** ಕಾರ್ಯಕ್ರಮವನ್ನು**೨೬ ನೇ ನವೆಂಬರ್೨೦೨೫** ರಂದು ಬಹಳ ವಿಜೃಂಭಣೆಯಿಂದ ಆಯೋಜಿಸಲಾಯಿತು.

ದೇವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಪ್ರಾರಂಭಿಕ ನೃತ್ಯ ಪ್ರತೀಕ್ಷ ಮತ್ತು ತಂಡದಿಂದ ಅದ್ಭುತವಾಗಿ ನೆರವೇರಿತು.

ಈ ಕಾರ್ಯಕ್ರಮಕ್ಕೆ ಗೌರವಾನ್ವಿತ ಸಂಸ್ಥಾಪಕ ಅಧ್ಯಕ್ಷರಾದ **ಡಾ.ಎ.ಸಿ.ಷಣ್ಮುಗಂ**, ಶ್ರೀರಂಗ ಎಜುಕೇಶನ್ ಟ್ರಸ್ಟ್ ನ ಅಧ್ಯಕ್ಷರಾದ ಶ್ರೀಮತಿ **ಎಸ್.ಲಲಿತಾ ಲಕ್ಷ್ಮಿ**, ಸಂಸ್ಥೆಯ ಅಧ್ಯಕ್ಷರಾದ ಶ್ರೀ **ಎ.ಸಿ.ಎಸ್.ಅರುಣ್ ಕುಮಾರ್** ವ್ಯಾಪಕವಾಗಿ ಬೆಂಬಲ ನೀಡಿದರು.

ಈ ಕಾರ್ಯಕ್ರಮಕ್ಕೆ **ಶ್ರೀಯುತ ಶ್ರೀನಿವಾಸ್ ಗೌಡ**, **ಐಪಿಎಸ್**, **ಮಾನ್ಯಪೊಲೀಸ್ ಅಧೀಕ್ಷಕರು**, **ಬೆಂಗಳೂರು ದಕ್ಷಿಣ ಜಿಲ್ಲೆ**, ಮುಖ್ಯಅತಿಥಿಗಳಾಗಿದ್ದರು. **ಡಾ.ವಿಜಯಾನಂದ್,** ಕಾರ್ಯಕಾರಿ ನಿರ್ದೇಶಕರು, **ಶ್ರೀಯುತ ಸಿ ಎನ್ ಸೀತಾರಾಮ್**, ಭಾ,ಆ,ಸೇ(ನಿ) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ರಾಜರಾಜೇಶ್ವರಿ ಸಮೂಹ ಸಂಸ್ಥೆ, **ಡಾ.ನವೀನ್ ಎಸ್**, ವೈದ್ಯಕೀಯ ನಿರ್ದೇಶಕರು,(ಅನುಪಸ್ಥಿತಿಯಲ್ಲಿ)**ಡಾ.ಪ್ರವೀಣ್ ಜಿ ಯು**,ವೈದ್ಯಕೀಯ ಪ್ರಾಂಶುಪಾಲರು, **ಡಾ.ರೋಷನ್ ಕುಮಾರ್**, ವೈದ್ಯಕೀಯ ಅಧೀಕ್ಷಕರು, **ಶ್ರೀಮತಿ ಅಶ್ವಿನಿ ಕೆ ಎಂ**,ನರ್ಸಿಂಗ್ ಪ್ರಾಂಶುಪಾಲರು, **ಡಾ.ವಿಜಯ್ ಕುಮಾರ್**, ಭೌತ ಚಿಕಿತ್ಸೆ ಪ್ರಾಂಶುಪಾಲರು,**ಡಾ.ಸಂತೋಷ್ ಕುಮಾರ್** ಅಲೈಡ್ ಪ್ರಾಂಶುಪಾಲರು, **ಡಾ.ಯೋಗೇಶ್ ಎಂ.ಕೆ**,ಅರೆ ವೈದ್ಯಕೀಯ ಪ್ರಾಂಶುಪಾಲರು, **ಡಾ.ನಂಜರಾಜು**, ಉಪಪ್ರಾಂಶುಪಾಲರು, **ಡಾ.ಮಂಜುಳ ಪಾಟೀಲ್** ಉಪಪ್ರಾಂಶುಪಾಲರು , ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳು ಹಾಗೂ ಗಣ್ಯರು ತಾಯಿ ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಿ, ದೀಪ ಬೆಳಗಿದರು.

ವೈದ್ಯಕೀಯ ಪ್ರಾಂಶುಪಾಲರಾದ **ಡಾ. ಪ್ರವೀಣ್ ಜಿ.ಯು** ರವರು ಎಲ್ಲರನ್ನು ಸ್ವಾಗತಿಸಿದರು , ಮುಖ್ಯ ಅತಿಥಿಗಳಜೀವನ ಹಾದಿ ಧೈರ್ಯ ಶ್ರಮ ಅವರ ಸಾಧನೆ ಅವರ ಕಿರು ಪರಿಚಯವನ್ನು ಡಾ.ಮಂಜುಳರವರು ತಿಳಿಸಿಕೊಟ್ಟರು.

**ಮುಖ್ಯ ಅತಿಥಿಗಳಾದ ಡಾ. ಶ್ರೀನಿವಾಸ್ ಗೌಡರ**ವರು ವಿದ್ಯಾರ್ಥಿಗಳೊಡನೆ **ಸಂವಾದ ರೀತಿಯ ಭಾಷಣಕ್ಕೆ** ಒತ್ತುಕೊಟ್ಟರು.ವಿದ್ಯಾರ್ಥಿಗಳು ಪ್ರಶ್ನೆ ಕೇಳುತ್ತಾ, ಅತಿಥಿಗಳು ತಮ್ಮ ಅನುಭವವನ್ನು ಹಂಚಿಕೊಂಡರು. ಅತಿಥಿಗಳು ತಾವು ಎಂಜಿನಿಯರಿಂಗ್ ಮುಗಿಸಿದ್ದರೂ , ಏಕೆ ಐಪಿಎಸ್ ಮಾಡಲು ಬಯಸಿದರು ಎಂಬ ವಿಷಯವನ್ನು ಪ್ರಸ್ತಾಪಿಸಿದರು. ಅವರ ತಮ್ಮ ಭಾಷಣದಲ್ಲಿವೈದ್ಯಕೀಯ ಸಂಸ್ಥೆಗಳಿಂದ ಪೊಲೀಸ್ ಇಲಾಖೆಯವರು ಏನನ್ನು ಅಪೇಕ್ಷಿಸುತ್ತಾರೆ,**ಪೊಲೀಸ್ ಮತ್ತು ವೈದ್ಯರ ಸಹಕಾರ**, ಒಟ್ಟಾಗಿ ಕೈ ಜೋಡಿಸಿ ಕೆಲಸ ಮಾಡುವುದು ಬಹಳ ಮುಖ್ಯ, ಯಾವುದೇ ವಿಷಯವನ್ನು ಪ್ರಸ್ತಾಪಿಸುವಾಗ ಏನು ಮುಚ್ಚುಮರೆ ಇಲ್ಲದೆ ಮುಕ್ತವಾಗಿರಬೇಕು. ವಿಷಯವನ್ನು ಎಷ್ಟು ಮುಚ್ಚಿಡುತ್ತೇವೆ ,ಪರಿಸ್ಥಿತಿಯನ್ನು ನಿಯಂತ್ರಿಸಲು ಅಷ್ಟೇಕಷ್ಟವಾಗುತ್ತದೆ ಎಂಬ ವಿಷಯವನ್ನು ತಿಳಿಸಿಕೊಟ್ಟರು. ತದನಂತರ ಅವರ ಭಾಷಣದಲ್ಲಿ ಕಾನೂನು

ಪ್ರಕ್ರಿಯೆಗಳು ಮತ್ತು ಸತ್ಯಾಂಶ ಪರಿಶೀಲನೆ ಬಗ್ಗೆ ಪ್ರಸ್ತಾಪಿಸಿದರು.**ಪ್ರಥಮ ಮಾಹಿತಿ ವರದಿ**ದಾಖಲಿಸುವ ಮೊದಲು ಅಥವಾ ಯಾವುದೇ ಕಾನೂನು ಕ್ರಮ ಕೈಗೊಳ್ಳುವ ಮೊದಲು ಸತ್ಯಾಂಶವನ್ನು ಪರಿಪೂರ್ಣವಾಗಿ ಪರಿಶೀಲಿಸುವುದು ನಿರ್ಣಯವಾಗಿದೆ. ಕೆಲವು ಉದಾಹರಣೆಗಳ ಮೂಲಕ ಇದರ ಮಹತ್ವವನ್ನು ತಿಳಿಸಿಕೊಟ್ಟರು. ನಂತರ ತಮ್ಮ ಸಂವಾದದಲ್ಲಿ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಸೈಬರ್ ಸುರಕ್ಷತೆ ಮತ್ತು **ಸೈಬರ್ ಅಪರಾಧ**ಗಳ ಬಗ್ಗೆ ತಿಳಿಸಿಕೊಟ್ಟರು. ಬೆಂಗಳೂರಿನಂತಹ ದೊಡ್ಡ ದೊಡ್ಡ ಮಹಾನಗರಗಳಲ್ಲಿ ಸೈಬರ್ ಅಪರಾಧಗಳು ಹೆಚ್ಚುತ್ತಿವೆ,**ಸ್ಟಾಕ್ ಮಾರ್ಕೆಟ್** ನಂತಹ ಹುಡುಕಿ ಹಗರಣಗಳು, ಬ್ಯಾಂಕ್ ಹಗರಣಗಳ ಬಗ್ಗೆ ತಿಳಿಸಿಕೊಟ್ಟರು. ನಂತರ '**ಗೋಲ್ಡನ್ ಸಮಯ**'ಅಂದರೆ ಯಾವುದೇ ವ್ಯಕ್ತಿಯು ತನ್ನ ಒಟಿಪಿ ಅಥವಾ ವೈಯಕ್ತಿಕ ವಿವರಗಳನ್ನು ನೀಡಿಸೈಬರ್ ಅಪರಾಧಕ್ಕೆ ತುತ್ತಾಗುತ್ತಾನೋ ಅವನು ಈ ಸಮಯದಲ್ಲಿ ತಕ್ಷಣ ವರದಿ ಮಾಡಿದರೆ ಮುಂಬರುವ ಸಾಕಷ್ಟುಅಪರಾಧವನ್ನು ತಡೆಯಲು ಸಹಾಯಕವಾಗಿದೆ. ಮೊಬೈಲ್ ಫೋನಿನಲ್ಲಿ ಅಪರಿಚಿತಲಿಂಕ್ ಗಳನ್ನು ಕ್ಲಿಕ್ ಮಾಡುವುದರಿಂದ, ಅಪ್ಲಿಕೇಶನ್ ನಲ್ಲಿ ಮೈಕ್ರೋಫೋನ್ ಅನುಮತಿ ನೀಡುವುದರಿಂದ, ಆಗುವ ತೊಂದರೆಗಳ ಬಗ್ಗೆ ತಿಳಿಸಿಕೊಟ್ಟರು. ಅತಿಥಿಗಳು ವೈಯಕ್ತಿಕ ಸುರಕ್ಷತೆ ಬಗ್ಗೆಜಾಗೃತಿ ಮೂಡಿಸಿದರು. ಯಾರೇ ಆದರೂ ಒಟಿಪಿ ಅಥವಾ ಪಾಸ್ವರ್ಡ್ ಗಳನ್ನು ಯಾರಿಗೂ ಹಂಚಿಕೊಳ್ಳಬಾರದು. ಇದರಿಂದಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿಸಿಕೊಟ್ಟರು.

ತಮ್ಮ ಮುಕ್ತಾಯದ ಮಾತಿನಲ್ಲಿ**ನಾಗರಿಕರ ಜವಾಬ್ದಾರಿ** ಮತ್ತು ಕರ್ತವ್ಯದ ಬಗ್ಗೆಪ್ರಸ್ತಾಪಿಸುತ್ತಾ ತಮ್ಮ ಯಶಸ್ಸಿನ ಏಳು ಸೂತ್ರಗಳನ್ನುಹಂಚಿಕೊಳ್ಳುತ್ತಾ ತಮ್ಮ ಸಂವಾದನಾ ಭಾಷಣವನ್ನುಮುಕ್ತಾಯಗೊಳಿಸಿದರು.

ಈ ಸಂವಾದವು ಮತ್ತು ಹೆಮ್ಮೆಯ ಮನೋಭಾವವು ನೆರೆದಿದ್ದ ಎಲ್ಲರ ಹೃದಯದಲ್ಲಿ ಪ್ರತಿಧ್ವನಿಸಿತು, ವೈದ್ಯಕೀಯ ಸಮುದಾಯದ ಬಾಂಧವ್ಯವನ್ನು ಮತ್ತು ಕರ್ನಾಟಕ ಜನರಿಗೆ ಸೇವೆ ಸಲ್ಲಿಸುವ ಅವರ ಬದ್ಧತೆಯನ್ನು ಮತ್ತಷ್ಟು ಬಲಪಡಿಸಿತು. ಈ ಸಾಂಪ್ರದಾಯಿಕ ಆಚರಣೆಯನ್ನು ನಾವು ಪ್ರತಿಭಂಬಿಸುತ್ತಿರುವಾಗ ಆರೋಗ್ಯ ಸಿಬ್ಬಂದಿ ವರ್ಗದವರು ಮಾತ್ರವಲ್ಲದೆ ನಮ್ಮ ರಾಜ್ಯದ ಸಾಂಸ್ಕೃತಿಕಪರಂಪರೆಯ ರಾಯಭಾರಿಗಳು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು , ಶ್ರದ್ದೆಯಿಂದ ಕೆಲಸ ಮಾಡಲು ಮತ್ತು ಜನರ ಯೋಗ ಕ್ಷೇಮಕ್ಕೆ ಕೊಡುಗೆ ನೀಡಲು ಕನ್ನಡ ರಾಜ್ಯೋತ್ಸವ ಎಲ್ಲರನ್ನು ಪ್ರೇರೇಪಿಸಲಿ, ಎಂದು ಹೇಳುತ್ತಾ ವೈದ್ಯಕೀಯ ಅಧೀಕ್ಷಕರಾದ **ಡಾ.ರೋಷನ್ ಕುಮಾರ್** ಅವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮ ರಾಷ್ಟ್ರಗೀತೆಯೊಂದಿಗೆ ಮುಕ್ತಾಯಗೊಂಡಿತು.

ಮಧ್ಯಾಹ್ನ ಊಟದ ನಂತರ ಸಭಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂದುವರೆದವು.

ಮೊದಲನೇ ವರ್ಷದ ವಿದ್ಯಾರ್ಥಿಗಳಿಂದ ಕೆಲವು ಪ್ರಸಿದ್ಧ ಕನ್ನಡ ಹಾಡುಗಳು ಅದ್ದೂರಿಯಾಗಿ ಸಾಮೂಹಿಕ ನೃತ್ಯ ( ಫ್ಲ್ಯಾಶ್ ಮಾಬ್) ನಡೆಯಿತು.ಕದಂಬರು ಹಾಗೂ ಪಲ್ಲವರು ರಾಜವಂಶದ ಇತಿಹಾಸದ ಕುರಿತು  ಕಿರು ನಾಟಕ ಪ್ರದರ್ಶಿಸಿದರು. ವಿದ್ಯಾರ್ಥಿಗಳಷ್ಟೇ ಅಲ್ಲದೆ ವೈದ್ಯಕೀಯ ಸಿಬ್ಬಂದಿ ವರ್ಗದವರೂ ಸಹ ಹಾಡು ಹಾಗೂ ಆಕರ್ಷಕ ನೃತ್ಯಗಳಿಗೆಮೆಲುಕು ಹಾಕಿದರು. ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ಸಾಂಸ್ಕೃತಿಕ ವೈವಿಧ್ಯತೆ ಪ್ರತಿನಿಧಿಸುವ ಉಡುಗೆ ತೊಡುಗೆಗಳ ಪ್ರದರ್ಶನನೀಡಿದರು. ಇನ್ನಿತರ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ವಿವಿಧ ರಾಜರು,ವೀರ ವನಿತೆಯರ ವೇಷಧರಿಸಿದ್ದರು. ರಾಜ್ಯೋತ್ಸವ ನಿಮಿತ್ತ ಸಾಂಸ್ಕೃತಿಕ ಸಮಿತಿಯ ವತಿಯಿಂದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಬಹುಮಾನ ವಿತರಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ಕಾರ್ಯಕ್ರಮದ ನೇತೃತ್ವವನ್ನು **ಸಾಂಸ್ಕೃತಿಕ ಸಮಿತಿಯು** ವಹಿಸಿತ್ತು.

**ಜೈ ಹಿಂದ್**, **ಜೈ ಕರ್ನಾಟಕ**,  **ಜೈ ಭುವನೇಶ್ವರಿ**, **ಜೈ ಚಾಮುಂಡೇಶ್ವರಿ**...